424(1131) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004ನೇ ಏಪ್ರಿಲ್ ಅಂತ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ (SSI) ಸರ್ಕಾರ ವಿತರಿಸಲಾಗಿದ್ದು ಸಹಾಯಧನ ಮೊತ್ತವೆಷ್ಟು;

ಆ) ಸಹಾಯಧನ ಪಡೆದ ಫಲಾನುಭವಿಗಳೆಷ್ಟು;

ಇ) ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಹಾಯಧನ ಮೊತ್ತವೆಷ್ಟು ಹಾಗೂ ಸಣ್ಣ ಕೈಗಾರಿಕೆಗಳೆಷ್ಟು;

ಈ) ವಿತರಿಸ ಬೇಕಾಗಿರುವ ಮೊತ್ತವೆಷ್ಟು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ: 31.3.2004ಕ್ಕೆ ರೂ. 429.43 ಕೋಟಿ ಬಿಡುಗಡೆಗೆ ಬಾಕಿ ಇರುತ್ತದೆ.

ಆ) ದಿನಾಂಕ: 1.1.99 ರಿಂದ 31.3.2003ರವರೆಗೆ ಕೆಲವೊಂದು ನಿರ್ದಿಷ್ಟ ವರ್ಗದ ಘಟಕಗಳಿಗೆ ಶೇ. 50ರಂತೆ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಹಣ ಪಡೆದಿರುವ 10340 ಘಟಕಗಳಿಗೆ ರೂ. 129.25 ಕೋಟಿ ಬಿಡುಗಡೆ ಮಾಡಲಾಗಿದೆ.

ಇ) 2004–05ನೇ ಸಾಲಿನಲ್ಲಿ ರೂ. 77.59 ಕೋಟಿ ಸಹಾಯ ಸಹಾಯಧನವನ್ನು ಶೇ. 50ರಂತೆ ಬಿಡುಗಡೆ ಮಾಡಲಾಗಿದೆ.

ಈ) ದಿನಾಂಕ: 31.12.2004ರ ಅಂತ್ಯಕ್ಕೆ 20238 ಘಟಕಗಳಿಗೆ ರೂ. 354.94 ಕೋಟಿ ಮೊತ್ತ ಬಿಡುಗಡೆ ಮಾಡಬೇಕಾಗಿದೆ. ಉಳಿದ ಸಹಾಯಧನವನ್ನು 2004–05 ಹಾಗೂ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

425(1129) : ಶ್ರೀ ಜೀವರಾಜ್, ಡಿ.ಎನ್(ಶೃಂಗೇರಿ): ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರ ಜವಳಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಿದೆಯೇ :

ಆ) ಉದ್ದೇಶಿಸಿದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು :

ಇ) ರಫ್ತು ನಿರ್ಭಂದ ನೀತಿಯಿಂದ ಕರ್ನಾಟಕದಲ್ಲಿನ ಜವಳಿ ಉದ್ಯಮಿಗಳು ಅವಕಾಶಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಈ) ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು?

ಶ್ರೀ ಸತೀಶ್. ಎಲ್. ಜಾರಕಿಹೊಳಿ (ಜವಳಿ ರಾಜ್ಯ ಸಚಿವರು)

ಅ) ಹೌದು.

ಆ) ಒಂದು ಪಾರ್ಕ್‌ನ್ನು ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಿದ್ದು, ಆ ಪಾರ್ಕಿಗೆ ಮೂಲಭೂತಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.